ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 1, March-April 2024, Pp. 93-96
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ನವ್ಯ ಕಥೆಗಾರರ ತೌಲನಿಕ ಪರಿಕಲ್ಪನೆ

**ಕೃಷ್ಣ ಆರ್.ಎಂ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳ್ಳಿ. (ವಿಸ್ತರಣಾ ಕೇಂದ್ರ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ನವ್ಯ ಕಾಲದ ಮುಖ್ಯ ಕಥೆಗಾರರಾದ ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯಿಕ ಸಾಂಸ್ಕೃತಿಕ, ಅಭಿವ್ಯಕ್ತಿ ಸ್ವರೂಪವು ಭಿನ್ನ ರೀತಿಯದಾಗಿದೆ. ನವ್ಯದ ಕಾಲಘಟ್ಟದ ಈ ಮೂವರು ಕಥೆಗಾರರಲ್ಲಿ ಜಾತಿ ಮತ್ತು ಮಹಿಳೆ ಕುರಿತು ಪ್ರತಿಪಾದಿಸಿದ ನಿಲುವುಗಳು, ಚಿತ್ರಿಸಿದ ಪಾತ್ರಗಳು, ಕಥನಕ್ರಮ, ವಿನ್ಯಾಸ, ತಂತ್ರ ವ್ಯಕ್ತಿ ನಿಷ್ಠತೆಯ ಜೊತೆಗೆ ಸಮಾಜನಿಷ್ಠೆ ಸ್ವರೂಪ ಇತ್ಯಾದಿ ಸಂಗತಿಗಳನ್ನು ತೌಲನಿಕವಾಗಿ ಇಲ್ಲಿ ಅವಲೋಕಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ನವ್ಯ ಸಾಹಿತ್ಯ, ತೌಲನಿಕ ಪರಿಕಲ್ಪನೆ, ಜಾತಿ ಪ್ರಜ್ಞೆ, ಮಹಿಳಾ ಸಂವೇದನೆ.*

### ಪೀಠಿಕೆ

ನವ್ಯ ಸಾಹಿತ್ಯ ಪ್ರಕಾರವು ಕನ್ನಡ ಭಾಷೆಯ ಸಾಮರ್ಥ್ಯ ಹಾಗೂ ಅಭಿವ್ಯಕ್ತಿಯ ಮಟ್ಟವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. 1950ರ ನಂತರ ಮೂರು ದಶಕಗಳು ನವ್ಯ ಸಾಹಿತ್ಯದ ಕಾಲಘಟ್ಟವಾಗಿದೆ. ನವ್ಯ ಸಾಹಿತ್ಯವು ಈ ಅವಧಿಯಲ್ಲಿ ಕನ್ನಡಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದೆ. ನವ್ಯ ಸಾಹಿತ್ಯದಲಿ ವಿನಾಯಕ ಕೃಷ್ಣ ಗೋಕಾಕರು ಪ್ರಮುಖರು ಇವರು ತಮ್ಮ ಸಾಹಿತ್ಯದಲ್ಲಿ ಅನೇಕ ಹೊಸ-ಹೊಸ ಪ್ರಯೋಗಗಳನ್ನು ಮಾಡಿದರು. ಇವರಲ್ಲದೇ ಅನೇಕ ಬರಹಗಾರರು ನವ್ಯ ಸಾಹಿತ್ಯಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಅವರು ತಮ್ಮ ಸಾಹಿತ್ಯದಲ್ಲಿ ಜಾತಿ ಮತ್ತು ಮಹಿಳೆ ಕುರಿತು ಪ್ರತಿಪಾದಿಸಿದ ನಿಲುವುಗಳು, ಚಿತ್ರಿಸಿದ ಪಾತ್ರಗಳು, ಕಥನಕ್ರಮ, ವಿನ್ಯಾಸ, ತಂತ್ರ ವ್ಯಕ್ತಿ ನಿಷ್ಠತೆಯ ಜೊತೆಗೆ ಸಮಾಜನಿಷ್ಠೆ ಸ್ವರೂಪ ಇತ್ಯಾದಿ ಸಂಗತಿಗಳನ್ನು ತೌಲನಿಕವಾಗಿ ಇಲ್ಲಿ ಅವಲೋಕಿಸಲಾಗಿದೆ.

### ಜಾತಿ ಪ್ರಜ್ಞೆ ಹಾಗೂ ವರ್ಗಪ್ರಜ್ಞೆ

ಭಾರತೀಯ ಸಾಮಾಜಿಕ ವ್ಯವಸ್ಥೆಯು ಶ್ರೇಣೀಕೃತಗೊಂಡಿದೆ. ಆಯಾಯ ಕಾಲದ ಸಾಮಾಜಿಕ ಜಾಡ್ಯಗಳು ಬರಹಗಾರರನ್ನು ತುಂಬಾ ಕಾಡುತ್ತಿವೆ. ಸಮಕಾಲೀನ ಪ್ರಜ್ಞೆಯಿಂದ ಬರೆಯುವ ಲೇಖಕ ಯಾವ ಕಾಲಕ್ಕೂ ಜೀವಂತವಾಗಿರಬಲ್ಲ. ಅನಂತಮೂರ್ತಿಯವರ ಕಥೆಗಳಲ್ಲಿ ಪರಂಪರಾಗತ ಮೌಲ್ಯಗಳ ಶೋಧನೆ ಅವರ ಒಟ್ಟು ಕಥಾ ಸಾಹಿತ್ಯದಲ್ಲಿ ಗ್ರಹಿಸಬಹುದಾಗಿದೆ. "ಪರಂಪರಾಗತ ಮೌಲ್ಯಗಳನ್ನು ವೈಯಕ್ತಿಕ ಅನುಭವಗಳ ಮುಖಾಮುಖಿಯಲ್ಲಿ ಪರೀಕ್ಷಿಸುವುದು ಇವರ ಕಥೆಗಳಲ್ಲಿ ಕಾಣುವ ಮುಖ್ಯ ಅಂಶ ಎಂದು ಜಿ. ಹೆಚ್. ನಾಯಕರು ಹೇಳಿರುವರು"[1] ಅವರು ಹುಟ್ಟಿ

***Please cite this article as:*** ಕೃಷ್ಣ ಆರ್.ಎಂ. (2024). ನವ್ಯ ಕಥೆಗಾರರ ತೌಲನಿಕ ಪರಿಕಲ್ಪನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(1), 93–96.

ಬಂದ ಜನಾಂಗದ ಮಿತಿಗಳನ್ನು ಸಣ್ಣತನವನ್ನು ಮಡಿವಂತಿಕೆಯನ್ನು ಮೀರುವುದು ಹಾಗೂ ಸಮಾಜವಾದಿ ಚಿಂತನೆಯ ನೆಲೆಗಳಿಂದ ಪಾಶ್ಚಾತ್ಯ ಪ್ರೇರಣೆಯ ಪ್ರಭಾವದಿಂದ ಕೆಳವರ್ಗದ ದಲಿತವರ್ಗದ ಬದುಕಿನತ್ತ ಕಾಳಜಿ ವಹಿಸುವುದು ಅವರ ಕಥನದಲ್ಲಿ ಕಾಣುವ ಮುಖ್ಯ ಅಂಶವಾಗಿದೆ. ಅನಂತಮೂರ್ತಿಯವರ ಕಥೆಗಳಲ್ಲಿ ಸಾಂಸ್ಕೃತಿಕವಾಗಿ ದಲಿತರ ಬದುಕಿನ ಬಗೆಗೆ, ರೀತಿ–ನೀತಿ, ಉಡುಗೆ–ತೊಡುಗೆ, ಆಹಾರ ಕ್ರಮ, ಜೀವನ ಕ್ರಮ ಇವುಗಳ ಕುರಿತು ಚಿತ್ರಿಸುವಾಗ ಒಳನೋಟಗಳು ಕಾಣಸಿಗುವುದಿಲ್ಲ. ದೇವನೂರ ಮಹಾದೇವ, ಸಿದ್ದಲಿಂಗಯ್ಯರವರ ಕಥಾ ನಿರೂಪಣೆಯಲ್ಲಿ ದಲಿತರ ಬದುಕಿನ ಒಳನೋಟಗಳಾದ ಹಸಿವು, ಶೋಷಣೆ, ನೋವು, ಹತಾಶೆ, ಬದುಕಿನ ಕ್ರಮ, ಅಸ್ಪೃಶ್ಯತೆ ಮೊದಲಾದುವುಗಳನ್ನು ಕಾಣಬಹುದು. ಅನಂತಮೂರ್ತಿಯವರ ಕಥೆಗಳಲ್ಲಿ ದಲಿತರ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ. ಆದರೆ ಸಾಂಸ್ಕೃತಿಕ ಗ್ರಹಿಕೆ ಕಾಣಲು ಸಾಧ್ಯವಾಗುವುದಿಲ್ಲ. ಪಿ. ಲಂಕೇಶರ ಕಥನಗಳಲ್ಲಿ ಜಾತ್ಯತೀತ ಪರಿಕಲ್ಪನೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಬಡತನ, ಶೋಷಣೆ, ಅಸ್ಪೃಶ್ಯತೆ, ಲಿಂಗ ತಾರತಮ್ಯ, ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯ ಮೊದಲಾದ ಅಂಶಗಳನ್ನು ಕೇಂದ್ರವಾಗಿರಿಸಿಕೊಂಡು ಲಂಕೇಶರು ಸಮಾಜ ಕೇಂದ್ರಿತ ನೆಲೆಗಟ್ಟಿನಲ್ಲಿ ಕಥೆಗಳನ್ನು ನಿರೂಪಿಸಿರುವರು. ಇವರ 'ಮುಟ್ಟಿಸಿಕೊಂಡವನು', 'ಸಹಪಾಠಿ', 'ಕಲ್ಲು ಕರಗುವ ಸಮಯ' ಕಥೆಗಳಲ್ಲಿ ಸಮಾಜದ ಜಡತ್ವ, ಜಾತಿ, ಅಸ್ಪೃಶ್ಯತೆ ಮುಖವಾಡಗಳನ್ನು ಕಳಚಿ ಜಾತ್ಯತೀತ ಪರಿಕಲ್ಪನೆಯನ್ನು ಈ ಕಥನಗಳಲ್ಲಿ ಚಿತ್ರಿಸಿದ್ದಾರೆ.

'ಮುಟ್ಟಿಸಿಕೊಂಡವನು' ಕಥೆಯಲ್ಲಿ ಮೇಲುಜಾತಿಯ ಬಸಲಿಂಗ ಅಸ್ಪೃಶ್ಯ ಜಾತಿಯ ಕಣ್ಣಿನ ವೈದ್ಯ ಡಾ.ತಿಮ್ಮಪ್ಪನವರಿಂದ ಚಿಕಿತ್ಸೆ ಮಾಡಿಸಿಕೊಂಡ ಮೇಲೆ ವೈದ್ಯರ ಜಾತಿ ತಿಳಿದು ಹಲುಬುವನು. ಅವನ ಈ ಆಂತರಿಕ ಜಾತಿಪ್ರಜ್ಞೆಯಿಂದಾಗಿ ಮತ್ತೆ ಡಾಕ್ಟರಲ್ಲಿಗೆ ಹೋಗಿ ಸರಿಯಾದ ಆರೈಕೆ ಪಡೆಯದೆ ತನ್ನ ಒಂದು ಕಣ್ಣು ಕಳೆದುಕೊಳ್ಳುತ್ತಾನೆ. ಮತ್ತೊಂದು ಕಣ್ಣಿಗೆ ರೋಗ ತಗುಲಿದಾಗ ಮೇಲು ಜಾತಿ ಡಾಕ್ಟರಲ್ಲಿಗೆ ಹೋಗಿ ಗುಣವಾಗದೆ ಹತಾಶನಾಗಿ ಮತ್ತೆ ಡಾ. ತಿಮ್ಮಪ್ಪನವರ ಬಳಿಗೆ ಹೋಗುವನು. ತಿಮ್ಮಪ್ಪ ಅವರ ಕಷ್ಟಕ್ಕೆ ಸ್ಪಂದಿಸಿ ಮತ್ತೊಂದು ಆಪರೇಷನ್ ಮಾಡಿ ಗುಣಪಡಿಸುವರು. ಬಸಲಿಂಗನಲ್ಲಿ ಅಂತರಂಗದಲ್ಲಿ ಹುದುಗಿದ ಜಾತಿ ವಿನಾಶಗೊಂಡು ವಿಶ್ವಮಾನವನಾಗುವನು. ಸಮಾಜಕ್ಕೆ ಅಂಟಿರುವ ಜಾತಿಯ ಜಾಡ್ಯವನ್ನು ಹೋಗಲಾಡಿಸಿ ಸಮ ಸಮಾಜ ನಿರ್ಮಿಸಬೇಕೆಂಬ ಆಶಯ ಕಥೆಗಾರರದ್ದಾಗಿದೆ.

ಪೂರ್ಣಚಂದ್ರ ತೇಜಸ್ವಿಯವರು ರಾಮಮನೋಹರ ಲೋಹಿಯಾರವರ ಸಮಾಜವಾದಿ ಚಿಂತನೆಗಳಿಂದ ಪ್ರಭಾವಿತರಾಗಿದ್ದವರು. ತೇಜಸ್ವಿಯವರು ಸಮಾಜದ ಜಾತಿ ಮತ್ತು ಅಸ್ಪೃಶ್ಯತೆಯನ್ನು ಗಂಭೀರ ವಿಮರ್ಶೆಗೆ ಒಡ್ಡಿ ಅವುಗಳನ್ನು ಹೋಗಲಾಡಿಸಲು ಶ್ರಮಿಸಿದರು. ಅವರ ಸಾಹಿತ್ಯದ ಮೂಲಕ ಜಾತ್ಯತೀತವಾದ ವರ್ಣಾತೀತವಾದ, ಲಿಂಗಾತೀತವಾದ ಸಮ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿದ್ದಾರೆ. ತೇಜಸ್ವಿ ಅವರ ಒಂದು ಕಥೆಯನ್ನು ಪ್ರಾಸಂಗಿಕವಾಗಿ ಈ ಕೆಳಗಿನಂತೆ ಚರ್ಚಿಸಲಾಗಿದೆ.

'ಹುಲಿಯೂರಿನ ಸರಹದ್ದು' ಕಥೆಯು ಒಂದು ಜೀವ ಇನ್ನೊಂದನ್ನು ಹದ್ದುಬಸ್ತಿನಲ್ಲಿಡಲು ಮಾಡುವ ಪ್ರಯತ್ನ ತೋರುತ್ತದೆ. ಇಲ್ಲಿ ಜಾತಿಯನ್ನು ಮೀರುವ ಯುವ ಸಮುದಾಯಕ್ಕೆ ಅಡ್ಡಿಯಾಗಿರುವ ಸಂಪ್ರದಾಯಗಳನ್ನು ಒತ್ತಾಯಪೂರ್ವಕವಾಗಿ ಹೇರುವ ಕುಟುಂಬ ಸದಸ್ಯರ ನಿಯಂತ್ರಣ ಕಾಣುತ್ತದೆ. ಸೋಮು ಅನ್ಯಜಾತಿಯ ನಳಿನಾಕ್ಷಿಯನ್ನು ಪ್ರೀತಿಸಿದ್ದು ಆಕೆಯನ್ನು ಮದುವೆಯಾಗುವುದಾಗಿ ತಂದೆಗೆ ತಿಳಿಸಿದಾಗ "ಈ ತಾಯ್ಗಂಡ ಮುಂಡೇವಕ್ಕೆಲ್ಲಾ ದೇವರಂತೆ, ದನ ತಿನ್ನೋರಿಗೆ ಗೊಬ್ಬರದಾಸೆ, ಯಾವುದೇ ಜಾತಿ ಹುಡುಗಿನ ಮದುವೆಯಾದೇನು ಅಂತ ಕುಲ ತೊರೆದೋರಿಗೆ ಇನ್ನು ದೇವು ದಿಂಡ್ರು"[2] ಈ ಬೈಯ್ಗುಳದಿಂದ ಇನ್ನಷ್ಟು ರೊಚ್ಚಿಗೆದ್ದ ಸೋಮು

ಹುಲಿಯೂರಿನ ಈ ಜಾತಿಯ ಸಂಕೋಲೆಗಳ ಸರಹದ್ದನ್ನು ಆದಷ್ಟು ಬೇಗ ದಾಟಲು ನಿಶ್ಚಯಿಸುತ್ತಾನೆ. ತಂದೆ ತಾಯಿಯರು ಸೂಚಿಸಿದ ಹೆಣ್ಣನ್ನು ಮದುವೆಯಾಗಲು ನಿರಾಕರಿಸುತ್ತಾನೆ. ಜಾತೀಯ ಸಂಕೋಲೆಯಿಂದ ಹೊರ ನಡೆದು ನಳಿನಾಕ್ಷಿಯನ್ನು ಮದುವೆ ಆಗುವನು. ಹುಲಿಯೂರಿನ ಸರಹದ್ದು ಇಡೀ ಭಾರತೀಯ ಜಾತಿ ಪರಂಪರೆಯ ಸಂಕೇತವಾದರೆ ಸೋಮು ಸಂವಿಧಾನದ ಆಶಯವನ್ನು ಈಡೇರಿಸುವ ಸ್ವತಂತ್ರ ಭಾರತದ ಜಾತ್ಯತೀತ ಗುಣವುಳ್ಳ ಆಧುನಿಕ ಪ್ರಜ್ಞೆಯ ಸಂಕೇತವಾಗಿದ್ದಾನೆ.

**ಮಹಿಳಾ ಸಂವೇದನೆ**

ಅನಂತಮೂರ್ತಿಯವರ ಕಥೆಗಳಲ್ಲಿ ಮಹಿಳಾ ಪಾತ್ರಗಳ ನಿರ್ಲಕ್ಷ್ಯತನ ಹಾಗೂ ಪುರುಷ ಪಾತ್ರಗಳ ವೈಭವೀಕರಣ ಕಂಡುಬರುತ್ತದೆ. ಇವರ ಕಥೆಗಳಲ್ಲಿ ಮಹಿಳೆ ಲೈಂಗಿಕ ಭೋಗದ ವಿಜೃಂಭಣೆಗಾಗಿಯೇ ರೂಪಗೊಂಡಿರುವಂತೆ ಭಾಸವಾಗುತ್ತದೆ. ಸಂಸ್ಕಾರದ ಚಂದ್ರಿ, ಭಾರತೀಪುರದ ಮಾರ್ಗರೇಟ್, 'ಅವಸ್ಥೆ' ಯ ಲೂಸಿನಾ, ಘಟಶ್ರಾದ್ಧದ ಯಮುನಕ್ಕ, ಸೂರ್ಯನ ಕುದುರೆಯ ಅಕ್ಕಯ್ಯ, ಪ್ರಸ್ತದ ಸೀತಕ್ಕ ಮೊದಲಾದ ಸ್ತ್ರೀ ಪಾತ್ರಗಳು ಭೋಗ ಜೀವನದ ವೈಭವೀಕರಣಕ್ಕೆ ಮೀಸಲಾಗಿರುವಂತೆ ಕಾಣಿಸುತ್ತದೆ. ಒಬ್ಬಳಾದರೂ ಉದಾತ್ತ ಮಹಿಳೆಯನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಲಿಲ್ಲ. ಹೆಣ್ಣು ಕೇವಲ ಕಾಮದ ಸಂಕೇತವಾಗಲಾರಳು. ಭೋಗದ ವಸ್ತುವಲ್ಲ. ಸೀತೆ, ದ್ರೌಪದಿಯಂತೆ ಉದಾತ್ತ ಗುಣಗಳನ್ನು ಹೊಂದಿ ಶ್ರೇಷ್ಠಳಾದವಳು. ಇವರ ಸಮಕಾಲೀನ ಕಾಲಘಟ್ಟದಲ್ಲಿ ರಚಿತವಾದ ಚದುರಂಗದ ವೈಶಾಖ, ಬಲ್ಲಾಳರ ಬಂಡಾಯ, ದೇವನೂರು ಮಹಾದೇವರ 'ಒಡಲಾಳ' ಈ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು ಭೋಗದ ಜೊತೆ ತ್ಯಾಗವನ್ನು ಲೈಂಗಿಕತೆಯ ಜೊತೆ ಕ್ರಾಂತಿಯನ್ನು ಉಂಟುಮಾಡಬಲ್ಲ ಪಾತ್ರಗಳಾಗಿವೆ. ವೈಶಾಖ ಕಾದಂಬರಿಯ ರುಕ್ಮಿಣಿ, ಬಂಡಾಯ ಕಾದಂಬರಿಯ 'ಯಾಮಿನಿ' ಒಡಲಾಳ ಕಾದಂಬರಿಯ ಸಾಕವ್ವ ಈ ಸ್ತ್ರೀ ಪಾತ್ರಗಳು ಸ್ತ್ರೀ ಸಾಧ್ಯತೆಯ ವೈವಿಧ್ಯತೆಗಳನ್ನು ಪ್ರಕಟಿಸುತ್ತಾ ಪುರುಷ ಪ್ರಧಾನ ನೆಲೆಗಟ್ಟಿಗೆ ಮುಖ್ಯ ಸವಾಲಾಗಿ ರೂಪುಗೊಂಡಿದೆ. ಡಿ.ಆರ್. ನಾಗರಾಜ್ ರವರು ಅನಂತಮೂರ್ತಿಯವರನ್ನು ಸಂದರ್ಶನದಲ್ಲಿ ಉದಾತ್ತ ಸ್ತ್ರೀ ಪಾತ್ರವನ್ನು ಏಕೆ ಸೃಷ್ಟಿಸಲಿಲ್ಲ ಎಂದು ಕೇಳಿದಾಗ ಅನಂತಮೂರ್ತಿಯವರು ಹೀಗೆ ಉತ್ತರಿಸುವರು "ನಿಮ್ಮ ಕಾದಂಬರಿಗಳಲ್ಲಿ ಪೂರ್ಣ ಪ್ರಮಾಣದ ಸ್ತ್ರೀ ಪಾತ್ರಗಳಿಲ್ಲ. (ಕಾರಂತ, ಕುವೆಂಪು ಅವರಲ್ಲಿ ಕಾಣುವ ಹಾಗೆ) ನಾನು ವಾಸ್ತವ ಮಾರ್ಗದ ಕಾದಂಬರಿಕಾರನಲ್ಲ. ನನ್ನ ಕೃತಿಯ ಶರೀರ ಸಾಂಕೇತಿಕವಾದದ್ದು. ಅಲ್ಲಿ ಹೆಣ್ಣು ಹೆಣ್ಣಾಗಿಯೇ ಬರಬೇಕಿಲ್ಲ. ಮರ, ಆಕಾಶ, ಹೂವು ರೂಪಕಗಳ ಮೂಲಕ ಬರಬಹುದು"[3] ಎಂದು ವಿವರಿಸಿರುವರು.

ಲಂಕೇಶರ ಕಥಾ ಸಾಹಿತ್ಯವನ್ನು ಅವಲೋಕಿಸಿದಾಗ ಮಹಿಳಾ ಸಂವೇದನೆ ಕಾಣಬಹುದು. ಮನುಷ್ಯನ ಬದುಕಿನಲ್ಲಿ ಲೈಂಗಿಕ ಸುಖಾಪೇಕ್ಷೆಗಿರುವ ಮಹತ್ವವನ್ನು ಲಂಕೇಶರ ಅನೇಕ ಕಥೆಗಳಲ್ಲಿ ಕಾಣಬಹುದು. ಗೊಮ್ಮಟೇಶ, ಕೊನೆ, ನಿವೃತ್ತರು ಸೆಪ್ಟೆಂಬರ್‌ನಲ್ಲಿ ಪ್ರಥಮ ರಾತ್ರಿ ಇಂತಹ ಕಥೆಗಳಲ್ಲಿ ಕಾಮದ ಸೆಳೆತವನ್ನು ಸಭ್ಯತೆಯ ಹಂಗಿಲ್ಲದೆ ಚರ್ಚಿಸುವ ಈ ಕಥೆಗಳು ಮುಕ್ತ ಲೈಂಗಿಕತೆಯನ್ನು ಪ್ರತಿಪಾದಿಸುವುದಿಲ್ಲ. ಆದರೆ ಲೈಂಗಿಕತೆಯನ್ನು ಕುರಿತು ಸಮಾಜದ ಆಷಾಢಭೂತಿತನವನ್ನು ಗೇಲಿ ಮಾಡುವಂತೆ ಇಲ್ಲಿ ಪಾತ್ರಗಳಿವೆ. ಲಂಕೇಶರ ಜೊತೆಗಾರ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ, ಗುತ್ತಿ ಗೀತಾ ಆದದ್ದು ಕಥೆಗಳಲ್ಲಿ ಮಹಿಳಾ ಸಂವೇದನೆ ಕಾಣಬಹುದು.

ಲಂಕೇಶರದು ಮೂಲತಃ ಗ್ರಾಮಮೂಲದ ಪ್ರಜ್ಞೆ, ಹೀಗಾಗಿ ಅವರ ಹೆಣ್ಣು ಜಗತ್ತು ಗ್ರಾಮಗಳಿಂದ ನಗರಗಳ ಕಡೆಗೆ ಚಲಿಸುತ್ತದೆ. ಹೀಗೆ ಚಲಿಸುವಾಗ ಹಳ್ಳಿಯ ಮನಸ್ಸುಗಳು ನಗರ ಜಗತ್ತಿಗೆ ಒಳಗೊಳ್ಳುವ ಪರಿಯನ್ನು ಲಂಕೇಶರು ಸೂಕ್ಷ್ಮತೆಯಿಂದ

ಕಾಣಬಲ್ಲರು. ಲಂಕೇಶರು ನವ್ಯದ ಲಕ್ಷಣವನ್ನು ಅರಿತು ಈ ನೆಲದ ಹೆಣ್ಣು ಮಕ್ಕಳ ವಾಸ್ತವದ ಸಂಕಟ, ಸಂದಿಗ್ಧತೆಗಳನ್ನು ತೀವ್ರವಾಗಿ ಅನಾವರಣ ಮಾಡಿರುವರು. ಲಂಕೇಶರ ದೇವಿ, ಶ್ಯಾಮಲಾ, ನಿರ್ಮಲಾ, ಸಾವಿತ್ರಿ, ರುದ್ರಾಣಿ, ಪಾರು, ಸುಭದ್ರ, ಪದ್ಮಾ, ಸರೋಜ, ರತ್ನ, ಮಂಜು ಮುಂತಾದ ಪಾತ್ರಗಳ ಮೂಲಕ ಮಹಿಳಾ ಸಂವೇದನೆ ಕಾಣಬಹುದು.

ಪೂರ್ಣಚಂದ್ರ ತೇಜಸ್ವಿ ಅವರ ಕಥನದಲ್ಲಿ ಮಹಿಳಾ ಸಂವೇದನೆ ಕಾಣಬಹುದು. ಅವರ ಕಥೆಗಳಲ್ಲಿ ಕ್ರಾಂತಿ ಉಂಟು ಮಾಡಬಲ್ಲ ಬದಲಾವಣೆ ಬಯಸುವ ಸಮಾಜಮುಖಿ ಮಹಿಳಾ ಪಾತ್ರಗಳು ಕಾಣ ಸಿಗುತ್ತವೆ. 'ಕಿರಗೂರಿನ ಗಯ್ಯಾಳಿಗಳು' ಕಥೆಯಲ್ಲಿ ಬರುವ ದಾನಮ್ಮ, ಸ್ತ್ರೀ ವಿಮೋಚನೆಯ ಕಹಳೆ ಊದಿದವಳು, ಊರಿನ ಜಾತಿ ಪಂಚಾಯ್ತಿ, ಆಚಾರ, ನಿರ್ಬಂಧ, ಮಹಿಳೆಯರಿಗೆ ಹಿಂಸೆ ಕೊಡುವ ಗಂಡಸಿನ ನೀಚತಂತ್ರ, ಇವುಗಳ ವಿರುದ್ಧ ಹೋರಾಡಿ ಮಹಿಳೆಯರಿಗೆ ಸಮಾನತೆಯನ್ನು ಪ್ರತಿಪಾದಿಸಿದವಳು. ಇಂತಹ ಪಾತ್ರವನ್ನು ಸೃಷ್ಟಿಸುವುದರ ಮೂಲಕ ಮಹಿಳಾ ಸಂವೇದನೆ ಪ್ರತಿಪಾದಿಸುವರು.

**ಅಡಿ ಟಿಪ್ಪಣಿ**

1. ಅಮೂರ, ಜಿ.ಎಸ್. (2000). *ಕನ್ನಡ ಕಥನ ಸಾಹಿತ್ಯ: ಸಣ್ಣ ಕಥೆ.* ಪ್ರಿಯದರ್ಶಿನಿ ಪ್ರಕಾಶನ. ಪು. 176
2. ಪೂರ್ಣಚಂದ್ರ ತೇಜಸ್ವಿ.ಕೆ.ಪಿ. (2009). *ಹುಲಿಯೂರಿನ ಸರಹದ್ದು.* ಪುಸ್ತಕ ಪ್ರಕಾಶನ. ಪು. 35.
3. ನಾಗರಾಜ. ಡಿ. ಆರ್. (1983). *ಅಮೃತ ಮತ್ತು ಗರುಡ.* ಅಕ್ಷರ ಪ್ರಕಾಶನ. ಪು.73.

**ಪರಾಮರ್ಶನ ಗ್ರಂಥಗಳು**


- ಅಮೂರ, ಜಿ.ಎಸ್. (2000). *ಕನ್ನಡ ಕಥನ ಸಾಹಿತ್ಯ: ಸಣ್ಣ ಕಥೆ.* ಪ್ರಿಯದರ್ಶಿನಿ ಪ್ರಕಾಶನ.
- ಅಮೂರ.ಜಿ.ಎಸ್. (2013). *ಯು.ಆರ್. ಅನಂತಮೂರ್ತಿ ವೈಚಾರಿಕತೆ ಮತ್ತು ಸಾಹಿತ್ಯ.* ಮನೋಹರ ಗ್ರಂಥಮಾಲೆ.
- ಅಶೋಕ ಟಿ.ಪಿ. (2014). *ಅನಂತಮೂರ್ತಿ ವಾಙ್ಮಯ.* ಅಕ್ಷರ ಪ್ರಕಾಶನ.
- ಕರೀಗೌಡ ಬೀಚನಹಳ್ಳಿ. *ವ್ಯಷ್ಟಿ ಮತ್ತು ಸಮಷ್ಟಿ,* ಅಜಂತ ಪ್ರಕಾಶನ.